ಅಸಲು ದಾವೆ ಸಂಖ್ಯೆ - 168/2015
ಡಿಡಬ್ಲ್ಯೂ - 02

ದಿನಾಂಕಃ 25.04.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿಯ ಪರ ಶ್ರೀ. ಕೆ ಸಿ ಪಿ ವಕೀಲರಿಂದ**

1. ನನಗೆ ವಯಸ್ಸು 35 ವರ್ಷ ಇರುತ್ತದೆ. ನಾನು 2ನೇ ತರಗತಿಯವರೆಗೆ ಶಾಲೆ ಕಲಿತಿದ್ದೇನೆ. ನನಗೆ ಕನ್ನಡ ಓದಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ವಕೀಲರು ತಾವೇ ತಯಾರಿಸಿ ಇಟ್ಟಿದ್ದರು ನೀವು ಬಂದು ಸಹಿ ಹಾಕಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ನಾನೇ ಹೇಳಿ ಬರೆಸಿದ್ದು ಎಂದು ನುಡಿಯುತ್ತಾರೆ. ಸದರಿ ಪ್ರಮಾಣಪತ್ರವನ್ನು ತಯಾರು ಮಾಡುವಾಗ ನನ್ನ ವಯಸ್ಸು 35 ಎಂದು ಹೇಳಿರುತ್ತೇನೆ. ನಂತರದಲ್ಲಿ ಸದರಿ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಏನು ಬರೆದಿದ್ದಾರೆ ಎಂದು ನಾನು ಓದಿ ನೋಡಿರುವುದಿಲ್ಲ ಎಂದರೆ ಸರಿ. ಓದಿ ನೋಡದೇ ಇದ್ದ ಕಾರಣ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ವಾದಿ ದಾವೆ ಹೂಡಿದ ನಂತರ ಪ್ರತಿವಾದಿಗೆ ನೋಟಿಸು ತಲುಪಿದಾಗ ಕೋರ್ಟಗೆ ಹಾಜರಾಗಿ ದಾವೆಗೆ ಸಲ್ಲಿಸಿದ ತಕರಾರು ಅರ್ಜಿಯನ್ನು ಓದಿ ತಿಳಿದುಕೊಂಡಿದ್ದೀಯಾ ಎಂದರೆ ನಾನು ಓದಿ ತಿಳಿದುಕೊಂಡಿಲ್ಲ. ಸದರಿ ಕೈಪಿಯತ್ತ ಮತ್ತು ತಕರಾರು ಅರ್ಜಿಯನ್ನು ವಕೀಲರು ತಯಾರು ಮಾಡಿ ಇಟ್ಟಿದ್ದರು ಅದಕ್ಕೆ ನಾನು ಸಹಿ ಮಾಡಿದೆನು ಆದರೆ ನನಗೆ ಸದರಿ ಕೈಪಿಯತ್ತ ಮತ್ತು ತಕರಾರು ಅರ್ಜಿಯಲ್ಲಿ ಏನು ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕೈಪಿಯತ್ತನ್ನು ತಯಾರು ಮಾಡುವಾಗ ಹಾತನಕಾಶೆಯ ಮಾಹಿತಿಯನ್ನು ನೀಡಿದ್ದೀರಾ ಎಂದರೆ ಸಾಕ್ಷಿಯು ನಾವು ಮಾಹಿತಿಯನ್ನು ವಕೀಲರಿಗೆ ನೀಡಿದ್ದೆವು ಎಂದು ನುಡಿಯುತ್ತಾರೆ. ಸದರಿ ಹಾತನಕಾಶೆಯಲ್ಲಿ ಪೂರ್ವ-ಪಶ್ಚಿಮ 33 ಪೂಟು, ಮತ್ತು ಉತ್ತರ-ದಕ್ಷಿಣ 99 ಪೂಟು ಎಂದು ಹೇಳಿ ಬರೆಸಿದ್ದೆವೆ ಎಂದರೆ ಸರಿ. ಸದರಿ ದಾವಾ ಆಸ್ತಿಯ ಪೂರ್ವ-ಪಶ್ಚಿಮ 33 ಪೂಟು, ಮತ್ತು ಉತ್ತರ-ದಕ್ಷಿಣ 99 ಪೂಟು ಇದೆ ಎಂದು ಯಾವುದಾದರೂ ಸರಕಾರಿ ದಾಖಲೆ ಮತ್ತು ಪಂಚಾಯತಿ ದಾಖಲಾತಿಗಳನ್ನು ನೀಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಈ ಮೇಲೆ ಹೇಳಿ ಬರೆಸಿದ ಹಾತನಕಾಶೆ ಆಸ್ತಿಯು ನಮ್ಮ ಹಿರಿಯರಿಂದ ಬಂದ ಆಸ್ತಿ ಅಲ್ಲ ಎಂದು ನುಡಿಯುತ್ತಾರೆ ಮತ್ತು ಯಾವ ವರ್ಷ ಖರೀದಿಸಿದ್ದು ಎಂದರೆ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಯಾರ ಹೆಸರಿನಲ್ಲಿ ಖರೀದಿ ಆಗಿದೆ ಎಂದರೆ ಖರೀದಿ ಆಗಿಲ್ಲ ಎಂದು ನುಡಿಯುತ್ತಾರೆ.

2. ಸದರಿ ಖರೀದಿ ಪತ್ರ 20 ರೂಪಾಯಿ ಬಾಂಡ್ ಪೇಪರ್ ಇರುತ್ತದೆ ಮತ್ತು ಹಕ್ಕುಪತ್ರವನ್ನು ಸಹ ಲಗತ್ತಿಸಿರುತ್ತೇವೆ. 3 ಸಂಚಗಾರ ಪಾವತಿ ಪತ್ರಗಳು ಮತ್ತು 2 ಹಕ್ಕುಪತ್ರಗಳು ಇದ್ದವು. ಸಂಚಗಾರ ಪಾವತಿ ಪತ್ರಗಳು ಬೇರೆ ಬೇರೆ ದಿನಾಂಕ, ತಿಂಗಳು ಮತ್ತು ವರ್ಷದಂದು ಆಗಿರುತ್ತವೆ. ಸಂಚಗಾರ ಪಾವತಿ ಪತ್ರಗಳು ಯಾವ ದಿನಾಂಕದಂದು ಆಗಿದೆ ಎಂದು ಹೇಳಲು ನನಗೆ ಆಗುವುದಿಲ್ಲ. ಹಕ್ಕುಪತ್ರಗಳು ಒಂದೇ ತಾರೀಖಿನಂದು ಆಗಿರುತ್ತವೆ ಆದರೆ ಯಾವ ದಿನಾಂಕ, ತಿಂಗಳು ಮತ್ತು ವರ್ಷದಂದು ಆಗಿರುತ್ತವೆ ಎಂದು ನನಗೆ ಗೊತ್ತಿಲ್ಲ. 3 ಸಂಚಗಾರ ಪಾವತಿ ಪತ್ರಗಳು ಆದ ದಿನದಂದು ನಾನು ಭಾಗವಹಿಸಿರಲಿಲ್ಲ. ಆ ಸಮಯದಲ್ಲಿ ನಾನು 2 ನೇ ತರಗತಿಗೆ ಶಾಲೆಗೆ ಹೋಗುತ್ತಿದ್ದೆ. ನಾನು 5 ವರ್ಷದವನಿದ್ದಾಗ ನನ್ನನ್ನು ಶಾಲೆಗೆ ದಾಖಲು ಮಾಡಿರುತ್ತಾರೆ. 2 ಹಕ್ಕುಪತ್ರಗಳು ಆದ ಬಗ್ಗೆ ನನಗೆ ಮಾಹಿತಿ ಇರುತ್ತದೆ ಎಂದರೆ ಸರಿ. ಸದರಿ ಹಕ್ಕುಪತ್ರಗಳಿಗೆ ನಾನು ಸಹಿಯನ್ನು ಮಾಡಿರುತ್ತೇನೆ.

3. ನಾನು ಹಾಜರುಪಡಿಸಿದ ದಾಖಲೆಗಳ ಬಗ್ಗೆ ಮಾಹಿತಿ ಇದೆಯಾ ಎಂದರೆ ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಿಡಿ-18,19,20 ರ ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆಯ ಮುಖಪುಟದಲ್ಲಿ ಮತ್ತು 2 ನೇ ಪುಟದಲ್ಲಿ ಸಾಕ್ಷಿಯ ಸಹಿ ಇರುವುದಿಲ್ಲ ಎಂದು ಸಾಕ್ಷಿಯು ದಾಖಲೆಯನ್ನು ನೋಡಿ ಪರಿಶೀಲಿಸಿ ಸಹಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಗೆ ಸಂಬಂಧಪಟ್ಟಂತೆ ಈಗಾಗಲೇ ಸಲ್ಲಿಸಿದ ದಾಖಲಾತಿಗಳನ್ನು ಹೊರತುಪಡಿಸಿ ಬೇರೆ ಯಾವುದಾದರೂ ದಾಖಲಾತಿಗಳು ನಿಮ್ಮ ಬಳಿ ಇದೆಯಾ ಎಂದರೆ ಸಾಕ್ಷಿಯು ಇರುವುದಿಲ್ಲ ಎಂದು ನುಡಿಯುತ್ತಾರೆ.

4. ಸಂಚಗಾರ ಪಾವತಿ ಪತ್ರವನ್ನು ಚಮನಸಾಬ ತಂದೆ ಪೀರಸಾಬ ನದಾಫ ಉರ್ಫ ಪಿಂಜಾರರವರು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ-18,19,20 ರ ದಾಖಲೆಗಳಲ್ಲಿ ಈ ಮೇಲೆ ಹೇಳಿದ ಚಮನಸಾಬ ತಂದೆ ಪೀರಸಾಬ ನದಾಫ ಉರ್ಫ ಪಿಂಜಾರರವರು ಬರೆದುಕೊಟ್ಟ ದಾಖಲಾತಿಗಳು ಅಲ್ಲ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಅವರೇ ಬರೆದುಕೊಟ್ಟಿದ್ದು ಎಂದು ನುಡಿಯುತ್ತಾರೆ. 2 ಹಕ್ಕುಬಿಟ್ಟ ಪತ್ರಗಳನ್ನು ಚಮನಸಾಬ ತಂದೆ ಪೀರಸಾಬ ನದಾಫ ಉರ್ಫ ಪಿಂಜಾರರವರೇ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಚಮನಸಾಬ ತಂದೆ ಪೀರಸಾಬ ನದಾಫ ಉರ್ಫ ಪಿಂಜಾರ ಇವರು ತಯಾರಿಸಿದ 2 ಹಕ್ಕುಬಿಟ್ಟ ಪತ್ರಗಳನ್ನು ಮತ್ತು 3 ಸಂಚಗಾರ ಪಾವತಿ ಪತ್ರಗಳನ್ನು ನ್ಯಾಯಾಲಯದ ಮುಂದೆ

ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 2 ಹಕ್ಕುಬಿಟ್ಟ ಪತ್ರಗಳನ್ನು ಮತ್ತು 3 ಸಂಚಗಾರ ಪಾವತಿ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೇ ಇದ್ದರೂ ಸಹ ಹಾಜರುಪಡಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ಸಂಚಗಾರ ಪಾವತಿ ಪತ್ರಗಳು ಮತ್ತು ಹಕ್ಕು ಬಿಟ್ಟ ಪತ್ರಗಳ ಬಗ್ಗೆ ಮಾಹಿತಿಯು ನನ್ನ ಸ್ವಂತಕ್ಕೆ ಇರುತ್ತದೆ ಎಂದು ನುಡಿಯುತ್ತಾರೆ. ಮೊದಲ ಸಂಚಗಾರ ಪಾವತಿ ಪತ್ರವು ಯಾವ ದಿನಾಂಕ, ತಿಂಗಳು, ವರ್ಷದಂದು ಆಗಿದೆ ಎಂದು ನನಗೆ ಗೊತ್ತಿಲ್ಲ. 3 ಸಂಚಗಾರ ಪಾವತಿ ಪತ್ರವು ಮತ್ತು 2 ಹಕ್ಕುಬಿಟ್ಟ ಪತ್ರಗಳು ಪಂಚಾಯತಿ ಆಸ್ತಿ ನಂ.211 ಕ್ಕೆ ಸಂಬಂಧಪಟ್ಟಿರುತ್ತದೆ. ಸದರಿ ಆಸ್ತಿಯು ಬಡ್ನಿ ಗ್ರಾಮ ಪಂಚಾಯತಿ, ಬಡ್ನಿ ಗ್ರಾಮದ ವ್ಯಾಪ್ತಿಯಲ್ಲಿರುವ ಆಸ್ತಿಯಾಗಿರುತ್ತದೆ. ಸದರಿ ದಾಖಲಾತಿಗಳು ಆಗುವಾಗ ಪ್ರತಿವಾದಿಗಳಿಬ್ಬರು ಅಂದರೆ ನಾನು ಮತ್ತು ನನ್ನ ಸಹೋದರ ಪ್ರತಿವಾದಿ ನಂ.1 ಹಾಜರು ಇದ್ದೆವು. 3 ಸಂಚಗಾರ ಪಾವತಿ ಪತ್ರವು ಎಷ್ಟು ಮೊತ್ತಕ್ಕೆ ಮಾತುಕತೆ ಆದವು, ಯಾವ ದಿನಾಂಕದಂದು ಮಾತುಕತೆ ಅಯಿತು ಎಂದರೆ ನನಗೆ ಗೊತ್ತಿಲ್ಲ. ಸಂಚಗಾರ ಮಾತುಕತೆ ಆದ ಎಷ್ಟು ದಿನಗಳ ನಂತರ 3 ಸಂಚಗಾರ ಪಾವತಿ ಪತ್ರಗಳು ತಯಾರು ಆದವು ಎಂದರೆ ನನಗೆ ಗೊತ್ತಿಲ್ಲ. ಸದರಿ 3 ಸಂಚಗಾರ ಪಾವತಿ ಪತ್ರಗಳನ್ನು ಸವಣೂರಿನಲ್ಲಿ ತಯಾರಿಸಿ ಚಮನಸಾಬ ತಂದೆ ಪೀರಸಾಬ ನದಾಫ ಉರ್ಫ ಪಿಂಜಾರ ರವರ ಮನೆಯಲ್ಲಿ ಸಹಿ ಮಾಡಿದೆವು. ಸದರಿ ಸಂಚಗಾರ ಪತ್ರಗಳ ಬಗ್ಗೆ ಚಮನಸಾಬ ಅವರೇ ಮಾಹಿತಿಯನ್ನು ನೀಡಿರುತ್ತಾರೆ. 3 ಸಂಚಗಾರ ಪಾವತಿ ಪತ್ರಗಳು ತಯಾರಾದ ಸಮಯದಲ್ಲಿ ನಾನು ಹಾಜರು ಇರಲಿಲ್ಲ, ನನ್ನ ಅಣ್ಣ ಪ್ರತಿವಾದಿ ನಂ.1 ಹಾಜರು ಇದ್ದರು. 3 ಸಂಚಗಾರ ಪಾವತಿ ಪತ್ರಗಳು ತಯಾರಾದ ಸಮಯದಲ್ಲಿ ನೀವು ಹಾಜರು ಇರಲಿಲ್ಲ ಅದರ ಬಗ್ಗೆ ಮಾಹಿತಿ ಇರಲಿಲ್ಲ ಎಂದರೆ ನನಗೆ ಮಾಹಿತಿ ಇದೆ ಮತ್ತು ನನ್ನ ಅಣ್ಣ ಎಲ್ಲ ಮಾಹಿತಿಯನ್ನು ಕಾಗದ ತೋರಿಸಿ ನನಗೆ ಹೇಳಿರುತ್ತಾರೆ. ನನ್ನ ಅಣ್ಣನು ನೀಡಿದ ಮಾಹಿತಿಯ ಕಾಗದಪತ್ರಗಳನ್ನು ಸಹ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು ಹಾಜರುಪಡಿಸಿದ ದಾಖಲೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಡಿ-18 ರಿಂದ 20 ಎಂದು ಈಗಾಗಲೇ ಗುರುತಿಸಿರುತ್ತಾರೆ ಮತ್ತು ಸದರಿ ನಿಡಿ-18 ರಿಂದ 20 ಇವುಗಳು ಮೂರು ಸಂಚಗಾರ ಪತ್ರಗಳು ಆಗಿರುತ್ತವೆ ಎಂದು ಗುರುತಿಸಿರುತ್ತಾರೆ.

6. ಸದರಿ ನಿಡಿ-18 ರಿಂದ 20 ದಾಖಲೆಗಳು ಸಂಚಗಾರ ಪಾವತಿ ಪತ್ರಗಳು ಅಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಗಳೇ ಸಂಚಗಾರ ಪಾವತಿ ಪತ್ರಗಳೇ ಎಂದು ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ಸದರಿ ಸಂಚಗಾರ ಪಾವತಿ ಪತ್ರಗಳಲ್ಲಿ ಮೊದಲನೇ ಪತ್ರದಲ್ಲಿ 19 ಸಾವಿರ ಎಂದು ಮೊತ್ತವನ್ನು ಕಾಣಿಸಿದ್ದು, ಇನ್ನುಳಿದ 2 ಸಂಚಗಾರ ಪಾವತಿ ಪತ್ರಗಳಲ್ಲಿ ಹಣದ ಬಗ್ಗೆ ಯಾವುದೇ ಹಣಕಾಸಿನ ಮಾಹಿತಿ ಕಾಣಿಸಿರುವುದಿಲ್ಲ. ಈ 3 ಸಂಚಗಾರ ಪಾವತಿ ಪತ್ರಗಳು ಹಣವನ್ನು ಪಡೆದುಕೊಂಡೇ ಪತ್ರಗಳು ತಯಾರು ಆಗಿರುತ್ತವೆ ಎಂದು ನುಡಿಯುತ್ತಾರೆ. 3 ಸಂಚಗಾರ ಪಾವತಿ ಪತ್ರಗಳನ್ನು ಸಾಕ್ಷಿ ನೀಡಿದ್ದು ಯಾವುದರಲ್ಲಿ ಹಣಕಾಸಿನ ಮಾಹಿತಿಯನ್ನು ನಮೂದಿಸಿದ್ದಾರೆ ಎಂದು ತೋರಿಸಲು ಹೇಳಿದಾಗ ಸಾಕ್ಷಿಯು ದಾಖಲೆಗಳನ್ನು ಪರಿಶೀಲಿಸಿದಾಗ ಸಾಕ್ಷಿಯು ಯಾವುದೇ ಹಣಕಾಸಿನ ಮೊತ್ತವನ್ನು ಕಾಣಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಯಾವುದೇ ಸ್ಥಿರಾಸ್ತಿಯ ಸಂಚಗಾರ ಪಾವತಿ ಪತ್ರಗಳು ತಯಾರಾದರೆ ಅದಕ್ಕೆ ಒಟ್ಟು ಹಣ ಮುಂಗಡ ಹಣ ಮತ್ತು ಬಾಕಿ ಹಣವನ್ನು ನೀಡಬೇಕಾಗುತ್ತದೆ ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ಬಡ್ನಿ ಗ್ರಾಮ ಪಂಚಾಯತಿಯಲ್ಲಿರುವ ಆಸ್ತಿ ನಂ.11 ಕ್ಕೆ ಸಂಬಂಧಪಟ್ಟಂತೆ ಚಮನಸಾಬ ತಂದೆ ಪೀರಸಾಬ ನದಾಫ ಉರ್ಫ ಪಿಂಜಾರ ರವರು ನಿಡಿ-18 ರಿಂದ 20 ಸಂಚಗಾರ ಪಾವತಿ ಪತ್ರಗಳನ್ನು ತಯಾರಿಸಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ನಿಡಿ-18 ರಿಂದ 20 ದಾಖಲಾತಿಗಳು ಎಲ್ಲಿ ತಯಾರಾದವು ಎಂಬುದರ ಬಗ್ಗೆ ಮಾಹಿತಿ ನನಗೆ ತಿಳಿದಿರುತ್ತದೆ.

7. ನಿಡಿ-18 ರಿಂದ 20 ದಾಖಲಾತಿಗಳನ್ನು ತೋರಿಸಿ ಅವುಗಳು ತಯಾರಾದ ದಿನಾಂಕ, ತಿಂಗಳು, ವರ್ಷವನ್ನು ಕೇಳಿದಾಗ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಡಿ-18 ರಿಂದ 20 ದಾಖಲಾತಿಗಳನ್ನು ಟೈಪ ರೈಟರ ಮಷಿನನಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಗಳನ್ನು ಟೈಪ ರೈಟರ ಮಷಿನನಲ್ಲಿ ಬೆರಳಚ್ಚು ಮಾಡಿಸಿರುವುದಿಲ್ಲ ಅದನ್ನು ಕಂಪ್ಯೂಟರ್ ಮುಖಾಂತರ ಟೈಪ್ ಮಾಡಿ ಪ್ರಿಂಟ್ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನಿಡಿ-18 ರಿಂದ 20 ದಾಖಲಾತಿಗಳನ್ನು ಚಮನಸಾಬ ಅವರು ಬರೆದುಕೊಟ್ಟಿಲ್ಲ ಆದರೂ ಸಹ ಅವರು ಬರೆದುಕೊಟ್ಟರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

8. ನಿಡಿ-18 ರಿಂದ 20 ದಾಖಲಾತಿಗಳನ್ನು ನೀನು ಮತ್ತು ಪ್ರತಿವಾದಿ ನಂ.1 ರವರು ಮೀಲಾಪಿಯಾಗಿ ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನಿಡಿ-18 ರಿಂದ 20 ರ ದಾಖಲಾತಿಗೆ ಲಾಡಸಾಬ, ಭೀಮಣ್ಣ, ಎನ್.ಎಚ್.ಬೂದಿಹಾಳ ರವರು ಸಹಿ ಮಾಡಿರುತ್ತಾರೆ. ಈ

ಮೂರು ಜನರು ಸಹಿ ಮಾಡಿದ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಡಿ-18 ರಿಂದ 20 ರ ಆಸ್ತಿಗೂ ಮತ್ತು ವಾದಿಯು ಹೂಡಿರುವ ದಾವಾ ಆಸ್ತಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಚಮನಸಾಬ ತಂದೆ ಪೀರಸಾಬ ನದಾಫ ಉರ್ಫ ಪಿಂಜಾರ ರವರು ಸಹಿ ಮಾಡಿದ ಬೇರೆ ದಾಖಲೆಗಳನ್ನು ನೋಡಿದ್ದೀರಾ ಎಂದರೆ ನೋಡಿಲ್ಲ ಎಂದು ನುಡಿಯುತ್ತಾರೆ. ಚಮನಸಾಬ ರವರ ಸಹಿಯನ್ನು ನೀನು ನೋಡದೇ ಇರುವ ಕಾರಣ ಅವರ ಸಹಿಯನ್ನು ಗುರುತಿಸಲು ಸಾಧ್ಯವಿಲ್ಲ ಎಂದರೆ ಸಾಕ್ಷಿಯು ನಾನು ಗುರುತಿಸುತ್ತೇನೆ ಎಂದು ನುಡಿಯುತ್ತಾರೆ. ನಿಡಿ-18 ರಿಂದ 20 ರ ದಾಖಲಾತಿಗಳಲ್ಲಿರುವ ಎಲ್ಲಾ ಸಹಿಗಳು ಕಪ್ಪು ಶಾಹಿಯಿಂದ ರುಜು ಮಾಡಲಾಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ನಿಡಿ-18 ರಿಂದ 20 ರ ದಾಖಲಾತಿಗಳನ್ನು ಸಾಕ್ಷಿಗೆ ತೋರಿಸಿದ್ದು ಅದರಲ್ಲಿ ನೀಲಿ ಶಾಹಿಯಿಂದ ಮಾಡಿದ ಸಹಿಗಳನ್ನು ಗುರುತಿಸಿರುತ್ತಾರೆ. ಕಪ್ಪು ಶಾಹಿಯಿಂದ ಸಹಿ ಮಾಡಿದ ದಾಖಲಾತಿಗಳು ಮತ್ತು ಸದರಿ ನಿಡಿ-18 ರಿಂದ 20 ದಾಖಲಾತಿಗಳು ಪ್ರತಿವಾದಿಗಳು ಸೃಷ್ಟಿಸಿದ ದಾಖಲಾತಿಗಳು ಎಂದರೆ ಸರಿಯಲ್ಲ. ನಿಡಿ-18 ರಿಂದ 20 ರಲ್ಲಿ ತೋರಿಸಿರುವ ಸಹಿಗಳನ್ನು ಈಗಾಗಲೇ ನಿಡಿ-18(ಎ), 19(ಎ) ಮತ್ತು 20(ಎ) ಸಹಿಯನ್ನು ಸಾಕ್ಷಿಗೆ ತೋರಿಸಿದ್ದು ಮೊದಲು ಸಹಿಗಳು ಬೇರೆ ಬೇರೆ ಇದೆ ಎಂದು ಒಪ್ಪಿಕೊಳ್ಳುತ್ತಾರೆ ನಂತರ ಸದರಿ ಸಹಿಗಳು ಎರಡು ಪೆನ್ನಿನಿಂದ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಈ ಮೇಲೆ ಹೇಳಿದ ಸಹಿಗಳು ಚಮನಸಾಬ ಅವರ ಸಹಿಗಳು ಅಲ್ಲ ಅವುಗಳನ್ನು ನೀವುಗಳೇ ಫೋರ್ಜರಿ ಸಹಿ ಮಾಡಿರುತ್ತೀರಿ ಎಂದರೆ ಸರಿಯಲ್ಲ.

9. ನಿಡಿ-1 ರಲ್ಲಿ ಹಾಳು ಬಾವಿ ಕಾಣುವುದಿಲ್ಲ, ನಿಡಿ-2 ರಲ್ಲಿ ಹಾಳು ಬಾವಿ ಇದೆ ಎಂದು ನುಡಿಯುತ್ತಾರೆ. ನಿಡಿ-2 ರಲ್ಲಿ ಹಾಳು ಬಾವಿ ಕಾಣುವುದಿಲ್ಲ ಎಂದರೆ ಸಾಕ್ಷಿಯು ಕಾಣುತ್ತದೆ ಅದರ ಸುತ್ತ ಗಿಡ ಗಂಟಿಗಳು ಬೆಳೆದಿವೆ ಎಂದು ನುಡಿಯುತ್ತಾರೆ. ನಿಡಿ-2 ರಲ್ಲಿ ಸರಕಾರಿ ರಸ್ತೆಗಳು ಕಾಣುವುದಿಲ್ಲ. ನಿಡಿ-3 ರಿಂದ 8 ಯಾವ ಆಸ್ತಿಗೆ ಸಂಬಂಧಪಟ್ಟಿದ್ದು ಎಂದರೆ ದಾಖಲಾತಿಗಳಲ್ಲಿ ಕಾಣುವುದಿಲ್ಲ ಎಂದು ನುಡಿಯುತ್ತಾರೆ. ನನಗಾಗಲೀ ಅಥವಾ ಪ್ರತಿವಾದಿ ನಂ.1 ರವರಿಗಾಗಲೀ ಜದ್ದೀರಸಾಬ ಎಂದು ಕರೆಯುತ್ತಾರೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಿಡಿ-8 ರಲ್ಲಿ ಜದ್ದೀರಸಾಬ ಎಂದು ತಪ್ಪಾಗಿ ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ. ಕಳೆದ 18-20 ವರ್ಷಗಳ ಮೇಲ್ಪಟ್ಟು ನಾವು ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ನಿಡಿ-18 ರಿಂದ 20 ಆಸ್ತಿಗೆ ಸಂಬಂದಪಟ್ಟಂತೆ ಸುಮಾರು 18-20

ವರ್ಷಗಳ ಹಿಂದೆಯೇ ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ನಿಡಿ-3 ರಿಂದ 8 ರ ದಾಖಲಾತಿಗಳು ನಿಡಿ-18 ರಿಂದ 20 ರಲ್ಲಿ ನಮೂದಿಸಿದ ಆಸ್ತಿಗೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-11, 12, 14 ಮತ್ತು 15 ರಲ್ಲಿ ಯಾವುದೇ ರಸ್ತೆ ಹಾಳು ಬಾವಿ ಕಾಣುವುದಿಲ್ಲ ಎಂದರೆ ಸರಿ. ನಿಡಿ-13 ರ ಪ್ರಕಾರ ಎರಡು ಕಡೆ ರಸ್ತೆ ಇಲ್ಲ ಎಂದರೆ ಸರಿಯಲ್ಲ. ನಿಡಿ-3 ರಿಂದ 12, 14 ಮತ್ತು 15 ರ ದಾಖಲಾತಿಗಳು ನಿಡಿ-18 ರಿಂದ 20 ಕ್ಕೆ ಸಂಬಂಧಪಟ್ಟ ದಾಖಲಾತಿಗಳಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.

ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ಪ್ರತಿವಾದಿಗಳು ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.

ಮಧ್ಯಂತರ ಅರ್ಜಿಗಳ ಸಂಖ್ಯೆ 9 ಮತ್ತು 10 ರ ಮೇಲೆ ಆದ ಆದೇಶದ ಮೇರೆಗೆ ಸಾಕ್ಷಿಯನ್ನು ಇಂದು ದಿನಾಂಕಃ 15.02.2024 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಸದರಿ ವಕೀಲರು ಗೈರು ಹಾಜರು, ನ್ಯಾಯ ಮತ್ತು ಸಮ್ಮತತೆಯ ಆಧಾರದ ಮೇಲೆ ಅಂತಿಮವಾಗಿ ಪಾಟೀ ಸವಾಲಿಗೆ ಮುಂದೂಡಲಾಯಿತು.

ಪ್ರತಿವಾದಿ ಮತ್ತು ಅವರ ಪರ ವಕೀಲರು ಗೈರು ಹಾಜರು. ಪಾಟೀ ಸವಾಲಿಗೆ ಮುಂದೂಡಲು ಕಾರಣಗಳು ಇರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.

ಶ್ರೀ ಪಿ ಬಿ ಹೆಚ್ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ಈಗಾಗಲೇ ಸಾಕಷ್ಟು ಸಮಯಾವಕಾಶ ನೀಡಿದ್ದರೂ ಪಾಟೀ ಸವಾಲಿಗೆ ಮುಂದೆ ಬಂದಿರುವುದಿಲ್ಲ. ಪಾಟೀ ಸವಾಲಿಗೆ ಮುಂದೂಡಲು ಸಕಾರಣಗಳು ಇರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.

ಶ್ರೀ ಆಯ್ ಆರ್ ಸಿ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ಆದೇಶದ ಹಾಳೆಗಳನ್ನು ಪರಿಶೀಲಿಸಲಾಗಿ ಈಗಾಗಲೇ ಸಾಕ್ಷಿಯ ಪಾಟೀ ಸವಾಲಿಗೆ ಸಾಕಷ್ಟು ಸಮಯಾವಕಾಶವನ್ನು ನೀಡಲಾಗಿದೆ. ಸಾಕಷ್ಟು ಸಮಯಾವಕಾಶ ನೀಡಿದ್ದರೂ ಪಾಟೀ ಸವಾಲು ಮಾಡಲು ಮುಂದೆ ಬಂದಿರುವುದಿಲ್ಲ. ಪಾಟೀ ಸವಾಲಿಗೆ ಮುಂದೂಡಲು ಸಕಾರಣಗಳು ಇರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.